ಹಾಗಾಗಿ ಸದ್ಗುಣಿಗಳೂ ಮಹಾವೀರರೂ ಎಂದು ಖಚಿತಪಡಿಸಿಕೊಂಡ ಮೇಲೆ ಚಕ್ರವರ್ತಿ ಇಬ್ಬರು ತರುಣರಿಗೆ ಅರಮನೆಯಲ್ಲಿ ಪ್ರವೇಶ ಕೊಟ್ಟು, ರಾಜಕುಮಾರಿಯ ಹೃದಯವನ್ನು ಅಪಹರಿಸಲು ಅವಕಾಶ ಮಾಡಿಕೊಟ್ಟ.

ಅವರರಲ್ಲಿ ಒಬ್ಬಾತ ಜರ್ಮನ್, ಇನ್ನೊಬ್ಬ ಸ್ಪ್ಯಾನಿಶ್.

ದಿನಗಳು ಉರುಳಿ ಎರಡು ತಿಂಗಳು ದಾಟಿತು. ಇಬ್ಬರ ನಡುವಿನ ಸ್ಪರ್ಧೆಯಲ್ಲಿ ನಿಶ್ಚಿತ ಫಲಿತಾಂಶ ಸಿದ್ಧಿಸಲೇ ಇಲ್ಲ. ಚಕ್ರವರ್ತಿ ಮ್ಯಾಕ್ಸ್ ಮಿಲಿಯನ್‌ಗೆ ಒಂದೆಡೆ ಅಚ್ಚರಿಯೂ ಇನ್ನೊಂದೆಡೆ ಆತಂಕವೂ ಏಕಕಾಲಕ್ಕೆ ಉಂಟಾಯಿತು. ಇತ್ತ ರಾಜಕುಮಾರಿಯ ಚಿತ್ತ ಇಬ್ಬರ ನಡುವೆ ಕೆಸುವಿನ ಎಲೆಯ ಮೇಲಿನ ನೀರ ಬಿಂದುವಿನಂತೆ ತೂಗುಯ್ಯಾಲೆಯಾಡುತ್ತಲೇ ಇತ್ತು. ಕೊನೆಗೊಮ್ಮೆ ಚಕ್ರವರ್ತಿ ಇಬ್ಬರೂ ವರರನ್ನು ಕರೆದು,

'ರಾಜಕುಮಾರಿಗೆ ಇನ್ನೂ ಏನನ್ನೂ ನಿರ್ಧರಿಸಲಾಗುತ್ತಿಲ್ಲ. ಆದ್ದರಿಂದ ನಿಮ್ಮಿಬ್ಬರ ನಡುವೆ ದ್ವಂದ್ವ ಸ್ಪರ್ಧೆ ಏರ್ಪಡಿಸಿ ಗೆದ್ದವನಿಗೆ ನನ್ನ ಮಗಳನ್ನು ವಿವಾಹ ಮಾಡಿ ಕೊಡಲು ನಿರ್ಧರಿಸಿದ್ದೇನೆ' ಎಂದ.

'ಚಕ್ರವರ್ತಿಗಳೇ, ಅದೆಂತಹ ದ್ವಂದ್ವ ಸ್ಪರ್ಧೆ?' ಇಬ್ಬರೂ ವರರು ಏಕಕಾಲಕ್ಕೆ ಕೇಳಿದರು.

'ಹೌದು, ಇದೊಂದು ಅಪರೂಪದ ಸ್ಪರ್ಧೆ... ಅಪಾಯಕರ ಆಯುಧಗಳಿಂದ ದ್ವಂದ್ವ ಸ್ಪರ್ಧೆ ಏರ್ಪಡಿಸಿ ಇಬ್ಬರಿಗೂ ಪ್ರಾಣಾಪಾಯ ತರಲು ನನ್ನ ಮನಸ್ಸು ಯಾಕೋ ಒಪ್ಪುತ್ತಿಲ್ಲ... ಆದ್ದರಿಂದ ಒಂದು ಹೊಸ ಉಪಾಯ ನನಗೆ ಹೊಳೆದಿದೆ...' ಎಂದ ಮ್ಯಾಕ್ಸ್‌ಮಿಲಿಯನ್.

'ಹೊಸ ಉಪಾಯವೇ?' ಜರ್ಮನ್ ವರ ಆಶ್ಚರ್ಯದಿಂದ ಕೇಳಿದ.

'ಹೊಸ ಉಪಾಯವೆಂದರೆ, ಒಂದು ದೊಡ್ಡ ಗೋಣಿಚೀಲವನ್ನು ನಿಮಗೆ ಒದಗಿಸುತ್ತೇನೆ. ಯಾರು ತನ್ನ ಎದುರಾಳಿಯನ್ನು ಹರಸಾಹಸದಿಂದ ಆ ಗೋಣಿಚೀಲದೊಳಗೆ ತುರುಕಲು ಸಮರ್ಥನಾಗುವನೋ ಅವನು ಸ್ವಯಂವರದಲ್ಲಿ ಗೆದ್ದನೆಂದು ಸಾರುತ್ತೇನೆ!'

ಇಬ್ಬರೂ ವರಮಹಾಶಯರು ಪರಸ್ಪರ ಮುಖಗಳನ್ನು ನಖಶಿಖಾಂತ ನೋಡಿಕೊಂಡರು. ಬೇರೆ ಉಪಾಯವಿಲ್ಲದ್ದರಿಂದ ಸ್ವಲ್ಪ ಸಮಯದ ನಂತರ ಇಬ್ಬರೂ ಸಮ್ಮತಿಸಿದರು.

ಸಮಸ್ತ ಸಾಮಂತರು, ಜನ ಪ್ರತಿನಿಧಿಗಳಿಂದ ಕೂಡಿದ, ತುಂಬಿದ ಒಡ್ಡೋಲಗದಲ್ಲಿ ಗೋಣಿಚೀಲದ ಸ್ಪರ್ಧೆ ಪ್ರಾರಂಭವಾಯಿತು!

ಒಂದೂವರೆ ಗಂಟೆಗೂ ಮೀರಿದ ಆ ನಿರಂತರ ಹೆಣಗಾಟದ ನಂತರ ಸ್ಪ್ಯಾನಿಶ್ ವರನನ್ನು ಜರ್ಮನ್ ವರ ಕೊನೆಯ ಹಂತದಲ್ಲಿ ಗೋಣಿಚೀಲದೊಳಗೆ ಯಶಸ್ವಿಯಾಗಿ ತುರುಕಿದನು. ಸ್ಪ್ಯಾನಿಶ್ ವರ ಸುಸ್ತಾಗಿದ್ದರಿಂದ ಅಂತಿಮ ಸುತ್ತಿನಲ್ಲಿ ಸುಲಭದಲ್ಲಿ ಗೋಣಿಚೀಲದೊಳಗೆ ಸೇರಿಕೊಳ್ಳುವಂತಾಯಿತು.

ಅನಂತರ ಜರ್ಮನ್ ವರ ಮುಗುಳ್ನಗುತ್ತಾ ಸ್ಪ್ಯಾನಿಶ್ ವರನಿದ್ದ ಗೋಣಿಚೀಲವನ್ನು ತನ್ನ ಬೆನ್ನಿಗೇರಿಸಿಕೊಂಡ. ಅಲ್ಲೇ ಪ್ರಾಂಗಣದಲ್ಲಿ ರತ್ನಖಚಿತ ಆಸನದಲ್ಲಿ ಆಸೀನಳಾಗಿದ್ದ ರಾಜಕುಮಾರಿಯ ಪದತಲದಲ್ಲಿ ಚೀಲವನ್ನು ಇಳಿಸುತ್ತಾ ಕೈಕಟ್ಟಿ ನಿಂತು ಗೌರವದಿಂದ ತಲೆಬಾಗಿದ.

ರಾಜಕುಮಾರಿ ಎದ್ದುನಿಂತು ಪ್ರತಿನಿಧಿಗಳತ್ತ ಕೈಬೀಸಿದಾಗ, ಕಿವಿಗಡಚಿಕ್ಕುವ ಕರತಾಡನ ಒಂದೇ ಸಮನೆ ಕೇಳಲಾರಂಭಿಸಿತು. ಮರುದಿನ ವಿವಾಹ ಸಂಭ್ರಮ ಸಡಗರ ಮತ್ತು ರಾಜ ವೈಭವದಿಂದ ನೆರವೇರಿತು!

(ಸಂಗ್ರಹ)